**ದಿನಾಂಕಃ 05.02.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಬಿ ಆರ್ ಹೆಚ್ ವಕೀಲರಿಂದಃ-**

ನಿಸಿ-24 ರ ದಾಖಲೆಯು ನನಗೆ ಸೇರಿರುತ್ತದೆ. ನಿಪಿ-24 ಯಾವ ದಾಖಲೆ ಎಂದರೆ ಸಾಕ್ಷಿಯು ನಮ್ಮ ನಿವೇಶನದ ದಾಖಲೆ ಎಂದು ನುಡಿಯುತ್ತಾರೆ. ನಿಪಿ-24 ಮಂಜೂರು ಪತ್ರ ಎಂದರೆ ಸಾಕ್ಷಿಯು ದಾವಾ ಆಸ್ತಿಯನ್ನು ನಾವು ಖರೀದಿಸುವ ಪೂರ್ವದಲ್ಲಿ ಸದರಿ ಆಸ್ತಿಯನ್ನು ನಾರಾಯಣಸ್ವಾಮಿ ರವರಿಗೆ ಪುರಸಭೆಯವರು ಮಂಜೂರು ಮಾಡಿದ್ದರು ಎಂದು ನುಡಿಯುತ್ತಾರೆ. ನಿಪಿ-24 ಯಾವ ಇಸವಿಯಲ್ಲಿ ಮಂಜೂರಾದ ಆಸ್ತಿಯು ಯಾವ ಸರ್ವೆ ನಂ ಮತ್ತು ಅಸಸ್ಮೆಂಟ್ ನಂಬರಿನಲ್ಲಿ ಬರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು 1980 ರಲ್ಲಿ ದಾವಾ ಆಸ್ತಿಯು ಮಂಜೂರಾಗಿದ್ದು ಅಲ್ಲಿಂದ ಇಲ್ಲಿಯವರಿಗೂ ಒಂದೇ ಅಸಸ್ಮೆಂಟ್ ನಂಬರ್ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-24 ರ ಆಸ್ತಿಯ ಪೂರ್ವಕ್ಕೆ ಃ ರೈಲ್ವೆ ಜಾಗ, ಪಶ್ಚಿಮಕ್ಕೆ ಃ ಹಿರೇಯಂಗಳ ರಸ್ತೆ, ಉತ್ತರಕ್ಕೆ ಃ ತಮಿಳು ಜನಾಂಗದವರ ಮನೆ, ದಕ್ಷಿಣಕ್ಕೆ ಃ ಉಮ್ಲಾನಾಯ್ಕ ರವರ ಮನೆ ಇರುತ್ತದೆ. ದಾವಾ ಆಸ್ತಿಯು ನಿಪಿ-24 ರಂತೆ ನಾರಾಯಣಸ್ವಾಮಿ ರವರಿಗೆ ಮಂಜೂರಾದ ನಂತರ ಸದರಿ ಆಸ್ತಿಯು ಮುನಿರಾಜು ರವರಿಗೆ ಹಾಗೂ ಲಕ್ಷ್ಮಿದೇವಿ ರವರಿಗೆ ಬಂದಿರುತ್ತದೆ. ಸದರಿ ಆಸ್ತಿಯನ್ನು ನಾರಾಯಣಸ್ವಾಮಿ ರವರಿಂದ ಮುನಿರಾಜು ಮತ್ತು ಲಕ್ಷ್ಮಿದೇವಿ ರವರು ಖರೀದಿಸಿರುತ್ತಾರೆ. ಸದರಿಯವರು ದಾವಾ ಆಸ್ತಿಯನ್ನು ಎಷ್ಟು ಮೌಲ್ಯಕ್ಕೆ ಖರೀದಿಸಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾರಾಯಣಸ್ವಾಮಿ ರವರಿಂದ ಮುನಿರಾಜು ಮತ್ತು ಲಕ್ಷ್ಮಿದೇವಿ ರವರು ಖರೀದಿಸಿರುವ ಚಕ್ಕುಬಂಧಿ ನಾನು ಈ ಮೇಲೆ ಹೇಳಿದ ಚಕ್ಕುಬಂಧಿಯಂತೆ ಇರುತ್ತದೆ. ನಾನು ಈ ಮೇಲೆ ಹೇಳಿದ ಚಕ್ಕುಬಂಧಿಗೂ ನಿಪಿ-23 ರಲ್ಲಿರುವ ಚಕ್ಕುಬಂಧಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

ನಿಪಿ-22 ರ ದಾಖಲೆಯಂತೆ ಅನುಸೂಯಮ್ಮ ರವರಿಂದ ನಾವು ದಾವಾ ಆಸ್ತಿಯನ್ನು ಖರೀದಿಸಿರುತ್ತೇವೆ. ದಾವಾ ಆಸ್ತಿಯನ್ನು ನಿಪಿ-22 ರಂತೆ ರೂ. 3,50,000 ಗಳಿಗೆ ಖರೀದಿ ಮಾಡಿರುತ್ತೇವೆ. ನಿಪಿ-21 ರ ದಾಖಲೆಯಂತೆ ಯಾರಿಂದ ಯಾರು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿಯನ್ನು 3-4 ಜನ ಖರೀದಿ ಮಾಡಿರುತ್ತಾರೆ ಅವರ ಹೆಸರು ಹಾಗೂ ಎಷ್ಟು ಹಣಕ್ಕೆ ಖರೀದಿಸಿರುತ್ತಾರೆ ಎಂದು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ-20 ರ ದಾಖಲೆಯಂತೆ ಯಾರಿಂದ ಯಾರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ದಾವಾ ಆಸ್ತಿಯ ಅಸಸ್ಮೆಂಟ್ ಸಂಖ್ಯೆ 4092 ಆಗಿರುತ್ತದೆ. ಪ್ರತಿವಾದಿಯ ದಾವಾ ಆಸ್ತಿ ಸಂಖ್ಯೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಅಸಸ್ಮೆಂಟ ಸಂ 4223ಃ4086 ರಂತೆ 1986 ರಲ್ಲಿ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ದಾವಾ ಆಸ್ತಿಯ ಅಕ್ಕಪಕ್ಕದಲ್ಲಿ ಪ್ರತಿವಾದಿಗಳ ಆಸ್ತಿ ಇಲ್ಲಾ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ದಾವಾ ಆಸ್ತಿಯ ಸ್ವಾದೀನಕ್ಕೆ ತಂಟೆ ತಕರಾರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.